**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ. 231/2017**
**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 11-9-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಆರ್ ಕೆ 2 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರಿಂದ**

1. ನನ್ನ ಅಜ್ಜಿಯ ಹೆಸರು ಹನುಮವ್ವ. ಸದರಿಯವರ ತವರೂರು ಮಾಳಪ್ಪನಹಳ್ಳಿ ಗ್ರಾಮ. ಸದರಿ ಹನುಮವ್ವ ಮಳಿಯಪ್ಪನ ತಂಗಿ ಎಂದರೆ ಸರಿ. ನನ್ನ ತಾಯಿಯ ಹೆಸರು ಹೊಳೆಯಮ್ಮ. ಸದರಿಯವರ ತವರು ಮನೆ ಕೂಡ ಮಾಳಪ್ಪನಹಳ್ಳಿ ಗ್ರಾಮ. ನನ್ನ ತಾಯಿ ಮಳಿಯಪ್ಪನ ಅಣ್ಣ ನಾಗಪ್ಪನ ಮಗಳು ಎಂದರೆ ಸರಿ. ನಾಗಪ್ಪನ ಮೊದಲನೇ ಅಣ್ಣನ ಹೆಸರು ಮರಿನಿಂಗಪ್ಪ. ಸದರಿ ಮರಿನಿಂಗಪ್ಪನ ಮಗಳು ಶಾರದ ಎಂಬುವವರನ್ನು ನಮ್ಮ ಊರಿಗೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿ. ಸದರಿಯವರನ್ನು ಈಶ್ವರಪ್ಪ ಎಂಬುವವರೊಂದಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಸದರಿ ಈಶ್ವರಪ್ಪ ನನ್ನ ಅಜ್ಜನ ತಮ್ಮನ ಮಗ.

2. ಮೇಲೆ ಹೇಳಿದ ಮರಿನಿಂಗಪ್ಪ ತನ್ನ ಪಾಲಿನ ಆಸ್ತಿಯನ್ನು ಮಗಳು ಶಾರದರವರಿಗೆ ಕ್ರಯಮಾಡಿದ್ದರು ಎಂದರೆ ಸರಿ. ದಾವಾ ಸರ್ವೆ ನಂಬರ್ನ ಪೈಕಿ 2 ಎಕರೆ 17 ಗುಂಟೆಯನ್ನು ತನ್ನ ಮಗಳಿಗೆ ಕ್ರಯಮಾಡಿದ್ದರು ಎಂದರೆ ಸರಿ. ನನ್ನ ತಾಯಿ ಹೊಳೆಯಮ್ಮನಿಗೆ ಆಸ್ತಿ ಬರುವ ಕಾಲಕ್ಕೆ ಅವರ ತಂದೆ ತೀರಿಕೊಂಡಿದ್ದರು ಎಂದರೆ ಸರಿ. ಅವರ ತಂದೆ ನಾಗಪ್ಪನ ಆಸ್ತಿಯನ್ನು ಕೊಟ್ಟಿದ್ದರು ಎಂದರೆ ಸರಿ. ಮರಿನಿಂಗಪ್ಪ ಮತ್ತು ಹೊಳೆಯಪ್ಪರವರು ವಿಭಾಗಮಾಡಿಕೊಳ್ಳುವ ನಾಗಪ್ಪ ಎಂಬುವವರು ತೀರಿಕೊಂಡಿದ್ದರಿಂದ ವಿಭಾಗದ

ನಾಗಪ್ಪನ ಒಬ್ಬಳೇ ಮಗಳಾದ ನನ್ನ ತಾಯಿಗೆ 2 ಎಕರೆ 27 ಗುಂಟೆ ಆಸ್ತಿ ದಾವಾ ಸರ್ವೆ ನಂಬರ್ ಪೈಕಿ ಬಂದಿತ್ತು ಎಂದರೆ ಸರಿ.

3. ನನ್ನ ಚಿಕ್ಕಮ್ಮ 2ನೇ ಪ್ರತಿವಾದಿಯ ಅಕ್ಕಂದಿರನ್ನು ಹೊಳೆಯಪ್ಪನ ಮಕ್ಕಳಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ಹೊಳೆಯಪ್ಪನ ಮನತನಕ್ಕೂ ಮತ್ತು ನಮ್ಮ ಮನೆತನಕ್ಕೂ ಬಹಳ ಹತ್ತಿರದ ಸಂಬಂಧ ಎಂದರೆ ಸರಿ. 2ನೇ ಪ್ರತಿವಾದಿಯ ಮದುವೆಯ ಕಾಲಕ್ಕೆ ದಾವಾ ಆಸ್ತಿಯನ್ನು 2ನೇ ಪ್ರತಿವಾದಿಗೆ ಕೊಡುತ್ತೇನೆ ಎಂದು ಹೊಳೆಯಪ್ಪ ಹೇಳಿದ್ದರು ಎಂದರೆ ಸರಿಯಲ್ಲ.

4. 2ನೇ ಪ್ರತಿವಾದಿಯ ಮದುವೆ ಕಾಲಕ್ಕೆ ನನಗೆ ಅಂದಾಜು 6 ರಿಂದ 7 ವರ್ಷ ಆಗಿತ್ತು. ನನ್ನ ಅಕ್ಕನ ಹೆಸರು ಪಾರ್ವತಮ್ಮ. ಅವರಿಗೆ ನನಗಿಂತ ಒಂದೆರಡು ವರ್ಷ ವಯಸ್ಸು ಜಾಸ್ತಿಯಾಗಿತ್ತು. ನನ್ನ ಅಕ್ಕನನ್ನು ಮಾಳಪ್ಪನಹಳ್ಳಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ನನ್ನ ಅಕ್ಕನ ನಡುವೆ ಸಂಬಂಧ ಚೆನ್ನಾಗಿದೆ.

5. 2ನೇ ಪ್ರತಿವಾದಿಯ ಮದುವೆ ಕಾಲಕ್ಕೆ ನಾನು ಸಣ್ಣವನಾದ್ದರಿಂದ ಏನೆಲ್ಲಾ ಮಾತುಕತೆಯಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 2ನರೇ ಪ್ರತಿವಾದಿಯ ಮದುವೆ ಕಾಲಕ್ಕೆ ಜಮೀನನ್ನು ಕೊಡುವ ಮಾತುಕತೆ ಆಗಿರುವ ವಿಷಯ ನನಗೆ ಗೊತ್ತಿಲ್ಲದೇ ಇರುವುದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

6. ದಿನಾಂಕ 6-5-1980ರ ದಾನಪತ್ರದಂತೆ 2ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2ನೇ ಪ್ರತಿವಾದಿಗೆ ಮಕ್ಕಳು ಆಗದೇ ಇದ್ದುದರಿಂದ ಜೀವನಾಂಶಕ್ಕಾಗಿ ದಾವಾ

ಆಸ್ತಿಯನ್ನು ಕೊಟ್ಟಿದ್ದರು ಆದರೆ ಆಸ್ತಿ ಕೊಟ್ಟ ನಂತರ ಮಕ್ಕಳಾದರು ಎಂದು ನುಡಿಯುವರು. 1 ಮತ್ತು 2 ನೇ ಪ್ರತಿವಾದಿಯರಿಗೆ ಮಕ್ಕಳು ಆಗದೇ ಇದ್ದ ಕಾರಣ ದಾವಾ ಆಸ್ತಿಯನ್ನು ಜೀವನಾಂಶಕ್ಕಾಗಿ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಕೊಟ್ಟ ನಂತರ ಮಕ್ಕಳಾದರು ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

7. ನಾನುಸಣ್ಣವನಿದ್ದಾಗಲೇನನ್ನ ತಂದೆ ತಾಯಿ ತೀರಿಕೊಂಡಿದ್ದರಿಂದ ನನ್ನನ್ನು ಪಾಲನೆ ಪೋಷಣೆ ಮಾಡುವ ಸಲುವಾಗಿ 2 ನೇ ಪ್ರತಿವಾದಿ ಮಕ್ಕಳನ್ನು ಮಾಕಡೊಳ್ಳಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವೆರದು ಸದರಿಯವರು ನೌಕರಿಯಲ್ಲಿ ಇದ್ದುದರಿಂದ ಬೇರೆ ಬೇರೆ ಕಡೆ ಇರುತ್ತಿದ್ದರು ಎಂದು ನುಡಿಯುುವರು. ಸದರಿ ಎಲ್ಲಾ ಸತ್ಯಾಶಂಗಳು ನನಗೆ ತಿಳಿದಿದ್ದರೂ ಕೂಡ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

8. ದಾನಪತ್ರದ ದಿನಾಂಕದಿಂದ ಇವತ್ತಿನವರೆಗೂ 2 ನೇ ಪ್ರತಿವಾದಿಯೇ ದಾವಾಆಸ್ತಿಯ ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರಾಗಿದ್ದರಿಂದ ದಾವಾ ಆಸ್ತಿಯನ್ನು ತನ್ನ ಮಗಳಾದ 3 ನೇ ಪ್ರತಿವಾದಿಗೆ ದಾನಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

9. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂಬ ವಿಷಯ ತಿಳಿದಿದ್ದರೂ ಕೂಡ ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರದ ವಿಷಯ ತಿಳಿದಿದ್ದರೂ ಕೂಡ ಆಸ್ತಿಯನ್ನು ಖರೀದಿಸಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ 5 ಜನ ಅಜ್ಜಂದಿರು ಮತ್ತು ನನ್ನ ತಂದೆ ತಾಯಿ ತಮ್ಮ ಜೀವಿತಾವಧಿಯಲ್ಲಿ ದಾವಾ ಆಸ್ತಿಯ ಬಗ್ಗೆ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯನ್ನು ಹೆಸರಿಗಷ್ಟೇ ಮಾಡಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

11. ದಾವಾ ಆಸ್ತಿಯನ್ನು ದಾನವಾಗಿ ಪಡೆದುಕೊಂಡ ನಂತರ 3ನೇ ಪ್ರತಿವಾದಿಯೇ ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿಯವರೇ ಮಾಲೀಕರು ಎಂದರೆ ಸರಿಯಲ್ಲ. 2 ಮತ್ತು 3ನೇ ಪ್ರತಿವಾದಿಯರು ಶಾಮೀಲಾಗಿ ಸುಳ್ಳು ದಾನಪತ್ರ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯನ್ನು 5 ಜನ ಅಜ್ಜಂದಿರು ಖರೀದಿಸಿದ್ದರು ಎಂಬ ವಿಷಯವನ್ನು ವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಹೊಳೆಯಪ್ಪನಿಂದ ಆಸ್ತಿಯನ್ನು ಖರೀದಿಸಿರುವ ವಿಷಯವನ್ನು ಬರೆಸಿಲ್ಲ ಎಂದರೆ ಸರಿಯಲ್ಲ.

13. 5 ಜನ ಅಜ್ಜಂದಿರು ತಮ್ಮ ಜೀವಿತಾವಧಿಯಲ್ಲಿ ವಿಭಾಗ ಮಾಡಿಕೊಂಡಿದ್ದರು. ಸದರಿ ಪಾಲು ವಿಭಾಗದಂತೆ ದಾವಾ ಆಸ್ತಿ ನನ್ನ ಅಜ್ಜ ಭೈರಪ್ಪನಿಗೆ ಬಂದಿತ್ತು. ದಾವಾ ಆಸ್ತಿಯು ನನ್ನ ಅಜ್ಜನ ಪಾಲಿಗೆ ಬಂದಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2ನೇ ಪ್ರತಿವಾದಿಗೆ ಸಂಪೂರ್ಣವಾಗಿ ಸೇರಿದ್ದರಿಂದ ನನ್ನ ಅಜ್ಜಂದಿರು ದಾವಾ ಆಸ್ತಿಯ ವಿಷಯವನ್ನು ಪ್ರಸ್ತಾಪಿಸಿರಲಿಲ್ಲ ಎಂದರೆ ಸರಿಯಲ್ಲ.

14. ನನ್ನ ಅಜ್ಜ ಭೆರಪ್ಪನ ತಂದೆ ಹೆಸರು ಕಲ್ಲಪ್ಪ. ಈ ಹಂತದಲ್ಲಿ ಸಾಕ್ಷಿಗೆ ಮ್ಯುಟೇಷನ್ ಆದೇಶ ಸಂಖ್ಯೆ 36/1980-81 ನ್ನು ತೋರಿಸಿ ಸದರಿ ದಾಖಲಾತಿಯಂತೆ ನಿಮ್ಮ ಅಜ್ಜಂದಿರು ವಿಭಾಗ ಮಾಡಿಕೊಂಡಿದ್ದಾರಾ ಎಂಬ ಪ್ರಶ್ನೆಗೆ **ಸಾಕ್ಷಿಯು ಹೌದು ಎಂದು ಉತ್ತರಿಸಿ ದಾಖಲಾತಿಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.** ನಿಡಿ-1 ರಂತೆ ದಾವಾ ಆಸ್ತಿ ನನ್ನ ಅಜ್ಜನಿಗೆ ಬಂದಿಲ್ಲ ಎಂದರೆ ಸರಿ.

15. ನನ್ನ ಸಾಕ್ಷ್ಯ ಪ್ರಮಾಣಪತ್ರದ 2ನೇ ಕಂಡಿಕೆಯ ವಿಷಯವನ್ನು ವಾದಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. 3ನೇ ಪುಟದ ಮೊದಲನೇ ಕಂಡಿಕೆಯ ವಿಷಯವನ್ನು ವಾಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಕೇವಲ ಅಸಲು ದಾವಾ ಸಂಖ್ಯೆ 9/2016ರ ವಿಷಯವನ್ನು ಮಾತ್ರ ಬರೆಸಿದ್ಲೇನೆ ಎಂದರೆ ಸರಿಯಲ್ಲ.

16. ನನ್ನ ಅಜ್ಜನ ತಮ್ಮ ಕಲ್ಲಪ್ಪ ಎಂಬುವವರು ವಿಭಾಗದ ಕಾಲಕ್ಕೆ ಹಾಜರಿದ್ದರು ಎಂಬ ವಿಷಯವನ್ನು ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ದಿನಾಂಕ 11-9-2008 ರಂದು ಜಮೀನಿನ ಬಗ್ಗೆ ದಾಖಲಾತಿಯನ್ನು

ಮಾಡಿದ್ದರು ಎಂಬ ವಿಷಯವನ್ನು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 12-9-2008 ರಂದು ಇನ್ನೊಂದ ು ದಾಖಲಾತಿಯನ್ನು ಮಾಡಿದ್ದ ವಿಷಯವನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 21-11-2008 ರಂದು ಪತ್ರ ಮಾಡಿದ ವಿಷಯವನ್ನು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

17. ವಿಭಾಗಪತ್ರದಂತೆ ದಾವಾ ಸ್ವತ್ತು ನಮ್ಮ ಪಾಲಿಗೆ ಬಂದಿತ್ತು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನಾನುಭೋಗದಲ್ಲಿ ಇದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಪಾಲಿನ ಆಸ್ತಿಯ ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

18. ಅಸಲು ದಾವಾ ಸಂಖ್ಯೆ 9/2016 ರಲ್ಲಿ 2 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಹಿಂದಿನ ದಾವೆ ವಜಾ ಆಗಿತ್ತು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**